ಅಥವಾ ಈಗ ಮಾನ್ಯ ಬೋರಯ್ಯನವರು ಹೇಳುವುದು ಸರಿಯೋ ? ಅಲ್ಲಹೆ ಖಾನಗಿ ಜನರು ಮಣ್ಣನ್ನು ಕಳುಹಿಸುವುದನ್ನು ಸರಕಾರಕ್ಕೆ ಕಳುಹಿಸುವಾಗ ಅದನ್ನು ಆಯಾ ಕೇಂದ್ರಗಳಲ್ಲೇ ಪರೀಕ್ಷೆ ಮಾಡುವಂತೆ ಮಾಡಲು ಎಲ್ಲ ಜಿರ್ಲಾ ಕೇಂದ್ರಗಳಲ್ಲೂ ಇಂತಹ ಮಣ್ಣಿನ ಸಂಶೋಧನಾ ಕೇಂದ್ರವನ್ನು ತೆರೆಯಲು ಇರಾಖೆಯವರು ಏನಾದರೂ ವ್ಯವಸ್ಥೆ ಮಾಡಿ ಕೊಂಡಿದ್ದಾರೋ ಹೇಗೆ ?

ಶ್ರೀ ಹೆಚ್. ಸಿ. ಬೋರಯ್ಯ.—ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಸಾಯಿಲ್ ಟೆಸ್ಟಿಂಗ್ ಮಾಡಿಸಲು ಆಯಾ ಬಿ. ಡಿ. ಓ ಗಳು ಇದ್ದಾರೆ. ಗ್ರಾಮಸೇವಕರು ಅಲ್ಲಿನ ರೈತರುಗಳಿಂದ ಮಣ್ಣನ್ನು ಪಡೆದುಕೊಂಡು ಅದನ್ನು ನಮ್ಮ ಸಂಶೋಧನೆ ಕೇಂದ್ರಗಳಿಂದ ಪರೀಕ್ಷೆಮಾಡಿಸಿ ಅನುಕೂಲಗಳನ್ನು ಮಾಡಿಕೊಡಿಸುತ್ತಾರೆ. ಇದಕ್ಕಾಗಿ 1965 ನೇ ಸೆಪ್ಟೆಂಬರು ತಿಂಗಳಲ್ಲೇ ಇಂತಹ ಒಂದು ಸಾಯಿಲ್ ಟೆಸ್ಟಿಂಗ್ ಸಂಶೋಧನಾ ಕೇಂದ್ರವನ್ನು ತುಂಗಭದ್ರ ಪ್ರದೇಶಕ್ಕೆ ಅನುಕೂಲವಾಗುವಂತೆ ಸರ್ಕಾರದವರು ಮಂಜೂರು ಮಾಡಿರುತ್ತಾರೆ.

Shifting of Korlahalli Village in Mundargi Taluk.

*Q.—257. Sri C. S. HULKOTI (Mundargi).—

Will the Government be pleased to state :—

(*a*) whether it has come to the notice of the Government that the whole Village 'Korlahalli' in Mundargi Taluk in the District of Dharwar is being affected by the back water of Tungabhadra Dam near Hospet ;

(*b*) whether it is a fact that there was a proposal to shift the whole village to some other site by the Health Department, Revenue Department, Taluk Development Board and the general public of the village since 4-5 years back ;

(*c*) whether they are aware that the foodgrains stored in the pits of the village are damaged during the rainy season on account of the village being surrounded by water in rainy season ;

(*d*) whether they are aware that the village is also affected by Malaria in the rainy season ;

(*e*) at what stage, the shifting of the village matter is pending ?

A.—Sri S. NIJALINGAPPA (Chief Minister).—

(*a*) Yes.
(*b*) Yes.
(*c*) Yes.
(*d*) No ; it has been reported that sanitation of the village is affected adversely.
(*e*) The question of shifting the entire village is before the T. B. Board.

ಶ್ರೀ ಸಿ. ಎಸ್. ಹುಲ್ಕೋಟಿ.—ತುಂಗಭದ್ರಾ ಅಣೆಕಟ್ಟಿನ ಒತ್ತುವರಿ ನೀರಿನಿಂದಾಗಿ ಇಲ್ಲಿರುವ ಕೊರ್ಲಹಳ್ಳಿ ಗ್ರಾಮಕ್ಕೆ ಬಹಳವಾಗಿ ತೊಂದರೆಯಾಗುತ್ತಿರುವುದರಿಂದ ಇದನ್ನು ನರಿಪಡಿಸಲು ತುಂಗಭದ್ರಾ ಬೋರ್ಡಿನವರನ್ನು ಒತ್ತಾಯ ಮಾಡಲು ಸರಕಾರ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನಾವು ಒತ್ತಾಯ ಮಾಡುತ್ತಲೇ ಬಂದಿದ್ದೇವೆ.